ಬಸವಕಲ್ಯಾಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದು

229(585) ಶ್ರೀ ಮಲ್ಲಿಕಾರ್ಜುನ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಬಸವಕಲ್ಯಾಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಆ) ಈ ಭಾಗವು ಅತ್ಯಂತ ಹಿಂದುಳಿದ ಪ್ರದೇಶವಾಗಿರುವುದರಿಂದ ಹಾಗೂ ನೆರೆಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಿಗೆ ಹತ್ತಿರವಿದ್ದು ಆ ರಾಜ್ಯಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಅಭಿವೃದ್ಧಿಗೊಂಡಿರುವುದನ್ನು ರಾಜ್ಯ ಸರ್ಕಾರವು ಮನಗಂಡು ಅದೇ ಮಾದರಿಯಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಬಸವಕಲ್ಯಾಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಲು ಸಮಗ್ರ ಕಾರ್ಯಕ್ರಮವನ್ನೇನಾದರೂ (ಮಾಸ್ಟರ್ ಪ್ಲಾನ್) ಹಮ್ಮಿಕೊಳ್ಳಲಾಗುವುದೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

2003-2004ನೇ ಸಾಲಿನ ಅಬಕಾರಿ ಹರಾಜು ಗುತ್ತಿಗೆದಾರರು

229ಎ (13) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ನೇ ಸಾಲಿಗೆ ಅಬಕಾರಿ ಹರಾಜು ಗುತ್ತಿಗೆಯನ್ನು ಪಡೆದಿದ್ದ ಗುತ್ತಿಗೆದಾರರು ಯಾರು; ಹಾಗೂ ಗುತ್ತಿಗೆಯನ್ನು ಎಷ್ಟು ಹಣಕ್ಕೆ ಪಡೆಯಲಾಗಿದೆ; (ವಿವರ ಒದಗಿಸುವುದು)

ಆ) ಈ ಗುತ್ತಿಗೆ ಅವಧಿಯು ಯಾವಾಗ ಪೂರ್ಣಗೊಳ್ಳಬೇಕಾಗಿತ್ತು; ಹಾಗೂ ಈವರೆಗೂ ಅವಧಿ ಮುಕ್ತಾಯವಾಗದೇ ಇರಲು ಕಾರಣಗಳೇನು;

ಇ) ಈ ಗುತ್ತಿಗೆ ಅವಧಿಯನ್ನು ಮುಂದೂಡಲಾಗಿದೆಯೇ;

ಈ) ಹಾಗಿದ್ದರೆ, ಎಷ್ಟು ಸಮಯದವರೆಗೆ ಮುಂದೂಡಲಾಗಿದೆ; ಹಾಗೂ ಅದಕ್ಕೆ ಕಾರಣವೇನು; (ವಿವರಗಳನ್ನು ಒದಗಿಸುವುದು)?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ದಿನಾಂಕ 30-6-2004ರಂದು. ಸರ್ಕಾರ ಬದಲಾದ ಕಾರಣ ಹಾಗೂ ಅಬಕಾರಿ ನೀತಿಯಲ್ಲಿ ಕೆಲವು ಸುಧಾರಣೆ ತರುವ ಸಲುವಾಗಿ.

ಇ, ಈ) ಸರ್ಕಾರ ಬದಲಾದ ಕಾರಣ ಹಾಗೂ ಅಬಕಾರಿ ನೀತಿಯಲ್ಲಿ ಕೆಲವು ಸುಧಾರಣೆ ತರುವ ಸಲುವಾಗಿ 2003-04ನೇ ಸಾಲಿನ ಕಿಸ್ತಿನ ಮೇಲೆ ಶೇ. 15ರಷ್ಟು ಕಿಸ್ತನ್ನು ಏಕರೂಪವಾಗಿ ಪ್ರತಿ ತಾಲ್ಲೂಕಿನಲ್ಲಿ ಪಡೆಯುವ ಷರತ್ತಿನ ಮೇರೆಗೆ ಸಾರಾಯಿ ಮಾರಾಟವನ್ನು ತಾತ್ಕಾಲಿಕ ವ್ಯವಸ್ಥೆ ಮೂಲಕ ದಿನಾಂಕ 1-7-2004 ರಿಂದ 31-8-2004ರ ವರೆಗೆ ಮುಂದುವರೆಸಲಾಗಿದೆ.